**OS No.338/2019**
**PW.3**

<u>ದಿನಾಂಕಃ **02.08.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ</u>

ವಾದಿಯು ನನ್ನ ಸಂಬಂಧಿಕರಾಗಬೇಕು. ಪ್ರತಿವಾದಿ-1 ಹಾಗೂ 2 ರವರು ನನ್ನ ಸಂಬಂಧಿಕರು. ವಾದಿಯು ಪ್ರಸ್ತುತ ದಾವೆಯನ್ನು ಭಾಗಾಂಶಕೋರಿ ಹೂಡಿರುತ್ತಾರೆ. ವಾದಿಯು ಹೇಳಿದ ಮೇರೆಗೆ ಸಾಕ್ಷಿಯನ್ನು ನುಡಿಯಲು ಬಂದಿರುತ್ತೇನೆ. ದಾವಾ ಆಸ್ತಿಯು ಸರ್ಕಾರಿ ಜಮೀನು ಆಗಿರುತ್ತದೆ. ದಾವಾಸ್ವತ್ತಿನ ಸರ್ವೇ ನಂಬರ್‌ನಲ್ಲಿ ಒಟ್ಟು ಸುಮಾರು 18-19 ಎಕರೆ ಜಮೀನು ಇರುತ್ತದೆ. ಸದರಿ ಜಮೀನಿನಲ್ಲಿ 6 ಜನ ಸ್ವಾಧೀನದಲ್ಲಿರುತ್ತಾರೆ. ಯಾರು ಯಾರು ಎಷ್ಟು ಸ್ವಾಧೀನದಲ್ಲಿದ್ದಾರೆ ಎಂದು ಗೊತ್ತಿಲ್ಲ. ಸ್ವಾಧೀನದಲ್ಲಿರುವ 6 ಜನರ ಹೆಸರುಗಳೆಂದರೆ ದೊಡ್ಡಕೆಂಪಯ್ಯ, ನರಸಿಂಹಮೂರ್ತಿ, ಜೂಲಪ್ಪ, ನಾರಾಯಣಪ್ಪ, ನಂಜಪ್ಪ ಮತ್ತು ಕೆಂಪಮ್ಮ. ದಾವಾಸ್ವತ್ತು ಈ ದಿನದವರೆಗೂ ಪೋಡಿಯಾಗಿರುವುದಿಲ್ಲ. ಸದರಿಯವರಿಗೆ ಸರ್ಕಾರದಿಂದ ದಾವಾಆಸ್ತಿಯಲ್ಲಿ ಅವರ ಪಾಲು ಮಂಜೂರಾತಿಯಾಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿ-1 ರವರ ಗಂಡ ಹಾಗೂ ಪ್ರತಿವಾದಿ-2 ರವರ ತಂದೆ ದಾವಾ ಆಸ್ತಿಯಲ್ಲಿ ಎಷ್ಟು ವರ್ಷಗಳಿಂದ ಸ್ವಾಧೀನದಲ್ಲಿದ್ದರು ಎಂದು ನನಗೆ ಗೊತ್ತಿಲ್ಲ.

ಪ್ರತಿವಾದಿ-1 ರವರ ಗಂಡ ರಾಮಯ್ಯ ದಾವಾಆಸ್ತಿಯಲ್ಲಿ ಪಹಣಿ ಪತ್ರಿಕೆಗಳಲ್ಲಿ ಕಾಲಂ ನಂ. 9 ಮತ್ತು 12 ರಲ್ಲಿ ಅವರ ಹೆಸರಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಿಃ 12.09.2013 ರಲ್ಲಿ ಪ್ರತಿವಾದಿ-1 ರವರ ಗಂಡ ತೀರಿಕೊಂಡಿರುತ್ತಾರೆ ಎಂದರೆ ಸರಿ. ಪ್ರತಿವಾದಿ-1 ಮತ್ತು 2 ರವರು ಫಾರಂ. 57 ರಲ್ಲಿ ಅರ್ಜಿಯನ್ನು ಭೂಮಂಜೂರಾತಿ ಇಲಾಖೆಗೆ ಸಲ್ಲಿಸಿರುತ್ತಾರೆ, ಸದರಿ ಅರ್ಜಿಯು ಇನ್ನೂ ಇತ್ಯರ್ಥವಾಗದೇ ಹಾಗೇ ಇರುತ್ತದೆ ಎಂದರೆ ಗೊತ್ತಿಲ್ಲ. ಪ್ರತಿವಾದಿ-1 ರವರ ಗಂಡ ವಾದಿಯ ಗಂಡನ ಅಣ್ಣನಾಗಿರುತ್ತಾರೆ ಎಂದರೆ ಸರಿ. ಪ್ರತಿವಾದಿ-1 ರವರ ಗಂಡ ತೀರಿಕೊಂಡ ನಂತರ ಪ್ರತಿವಾದಿ-1 ಮತ್ತು 2 ರವರ ದಾವಾಸ್ವತ್ತಿನಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ನನಗೆ ಗೊತ್ತಿಲ್ಲ. ವಾದಿಯು ಪ್ರತಿವಾದಿಗಳು ಸ್ವಾಧೀನದಲ್ಲಿರುವ ಸ್ವತ್ತಿನ ಮೇಲೆ ಅವರು ಸಹ ಪರಿಹಾರ ಕೇಳುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ-1 ರವರ ಗಂಡ ಹಾಗೂ ಅವರ ಅಣ್ಣ ತಮ್ಮಂದಿರ ನಡುವೆ ಭಾಗವಾಗಿರುವ ವಿಚಾರ ನನಗೆ ಗೊತ್ತಿರುವುದಿಲ್ಲ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಸೂಲುಕುಂಟೆ ಗ್ರಾಮದಲ್ಲಿ ವಾಸವಾಗಿದ್ದು, ವಾದಿಗೆ ಸಹಾಯ ಮಾಡಿ ದಾವಾಸ್ವತ್ತನ್ನು ವಾದಿಯ ಪರವಾಗಿ ಕೊಡಿಸಬೇಕೆಂಬ ಉದ್ದೇಶದಿಂದ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಪ್ರಕರಣದ ವಿಚಾರ ಗೊತ್ತಿಲ್ಲದಿದ್ದರೂ ಸಹ ನ್ಯಾಯಾಲಯದ ಮುಂದೆ ಬಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾಸ್ವತ್ತಿಗೆ ಸಂಬಂಧಿಸಿದ ರೆವಿನ್ಯೂ ದಾಖಲೆಗಳು ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ.

<u>ಮರು ವಿಚಾರಣೆಃ</u> ಇಲ್ಲ

**(ನನ್ನ ಉಕ್ತಲೇಖನ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಇದೆ**

**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ,**
**ದೊಡ್ಡಬಳ್ಳಾಪುರ .**